**ಸಾಕ್ಷಿಯನ್ನು ದಿನಾಂಕಃ 05-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ**

ನಿಪಿ 1 ದಾಖಲೆಯ 1981-82 ಸಾಲಿಗೆ ಸೇರಿದ ದಾಖಲೆ ಆಗಿರುವುದು ಅಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ಸದರಿ ದಾಖಲೆಯ ಪ್ರಕಾರ ಡೊರ ನಂ 277/2045 ಎಂದು ನಮೂದಾಗಿದೆ ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ 3 ರಲ್ಲಿ ಡೊರ ನಂ 221/2045 ಎಂದು ನಮೂದಗಿದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಡೊರ ನಂ 221/2045 ಇದು ನಮಗೆ ಸೇರಿದ ಅಸ್ತಿಯಾಗಿರುತ್ತದೆ ಎಂದು ನುಡಿದರು.  ನಿಪಿ 1 ರಲ್ಲಿಯೂ ಕೂಡ ಸುಡುಗಾರ ಸಿದ್ದಪ್ಪ ಎಂಬ ಹೆಸರು ನಮೂದು ಇದೆ ಅಂದರೆ ಅವರು ನಮ್ಮ ತಂದೆಯಾಗಿರುವರು. ನಿಪಿ 1 ರಲ್ಲಿ ದಾವಾ ಅಸ್ತಿಯ ವಿಸ್ತಿರ್ಣವನ್ನು ಕಾಣಿಸಲಾಗಿರುವುದಿಲ್ಲ ಅಂದರೆ ಸರಿಯಲ್ಲ. ನಾವು ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಅಂದರೆ ಸರಿಯಲ್ಲ.

2. ಪುರಸಭೆಯು ಸಿವಿಲ್ ಸ್ವಭಾವದ ತಂಟೆ ತಕರಾರುಗಳಿಗೆ ತಾವು ಜವಾಬ್ದಾರಿ ಅಲ್ಲ ಎಂಬ ಶರತ್ತಿನ ಮೇಲೆ ನನಗೆ ನಿಪಿ 3 ನ್ನು ಕೊಟ್ಟಿರುವರು ಅಂದರೆ ಸರಿಯಲ್ಲ. ನಾನು ಸಲ್ಲಿಸಿದ ಅರ್ಜಿಯ ಅಧಾರದ ಮೇಲೆ ಪುರಸಬೆಯವರು ಮುಟೇಶನ್ ಮಾಡಿ ಖಾತೆ ನೀಡಿರುವರು ಅಂದರೆ ಸರಿ.2013-2014 ರಲ್ಲಿ ಮುಟೇಶನ್ ಅದಾರದ ಮೇಲೆ ಸುಣಗಾರ ಸಿದ್ದಪ್ಪನ ಹೆಸರನ್ನು ತೆಗೆದು ಹಾಕಿರುವುದು ಮತ್ತು ನನ್ನ ಹೆಸರನ್ನು ಬರೆದು ವಿಸ್ತಿರ್ಣವನ್ನು ಸಹ ತೋರಿಸಿರುವರು ಅಂದರೆ ಸರಿ.

**ಸಾಕ್ಷಿಯ ಸಹಿ** 05.12.2025

ನಿಪಿ 6 ದೃಡೀಕೃತ ಸ್ಥಿರ ಸ್ವತ್ತಿನ ಕ್ರಯ ಪತ್ರದ ಶೆಡ್ಯೂಲಿನಲ್ಲಿ 280/2046 ಮತ್ತು 281/2046 ಇವುಗಳನ್ನು ಕಾಣಿಸಲಾಗಿದೆ ಅದು ಸುಳ್ಳು ಸೃಷ್ಟಿಯಾಗಿರುತ್ತದೆ. ನಮ್ಮ ಡೊರ ನಂ 221/2045 ಇರುತ್ತದೆ. ಡೊರ ನಂ 221/2045 ಮತ್ತು ಮೇಲೆ ಹೇಳಿದ ಖರೀದಿ ಪತ್ರದಲ್ಲಿ ಕಾಣಿಸಿರುವ ಡೊರ ನಂ 280/2046 ಮತ್ತು 281/2046 ಇವೆರಡೂ ಬೇರೆ ಬೇರೆ ಆಗಿವೆ ಅಂದರೆ ಸರಿಯಲ್ಲ.

3. ಪ್ರತಿವಾದಿಯರು ಡೊರ ನಂಬರುಗಳನ್ನು ಸೃಷ್ಟಿಸಿ ಖರೀದಿ ಪತ್ರಗಳನ್ನು ಮಾಡಿಕೊಂಡಿರುವರು ಎಂದು ನಾನು ಪುರಸಭೆಗೆ ನಾನು ದೂರು ಕೊಟ್ಟಿರುವುದಿಲ್ಲ. ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡಿರುವರು ಎಂದು ನಾನು ಪೊಲೀಸರಿಗೆ ದೂರನ್ನು ನೀಡಿದ್ದೇನೆ ಅದಕ್ಕೆ ಸಂಬಂದ ಪಟ್ಟಂತೆ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಪೊಲೀಸರಿಗೆ ದೂರು ನೀಡಿದ ಸಮಯದಲ್ಲಿ ಪೊಲೀಸರು ನೀಡಿರುವ ಹಿಂಬರವನ್ನು ಹಾಜರು ಪಡಿಸಿರುವುದಿಲ್ಲ ಕಾರಣ ಹಿಂಬರವನ್ನು ನೀಡಿರುವುದಿಲ್ಲ. ಪ್ರತಿವಾದಿ ಅತಿಕ್ರಮಣ ಮಾಡಿರುವ ಜಾಗದ ಪೂರ್ವಕ್ಕೆ ಲಕ್ಷ್ಮಮ್ಮನ ಮನೆ, ಪಶ್ಚಿಮಕ್ಕೆ ನನ್ನ ಮನೆ, ಉತ್ತರಕ್ಕೆ ದಾರಿ ಮತ್ತು ದಕ್ಷಿಣಕ್ಕೆ ದಾರಿ ಇರುವುದು.

4. ಪ್ರತಿವಾದಿಗಳು ಯಾವುದೇ ಜಾಗವನ್ನು ಅತಿಕ್ರಮಣ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಅವರು ತಮ್ಮ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡು ಡೋರ ನಂಬರು ಪಡೆದಿರುವರು ಅಂದರೆ ಸರಿಯಲ್ಲ. ಪ್ರತಿವಾದಿಗಳ ಜಾಗ ನನ್ನ ಅಸ್ತಿಯ ಪಕ್ಕದಲ್ಲಿ ಇರುವುದರಿಂದ ಅವರ ಅಸ್ತಿಯನ್ನು ನನಗೆ ಕೊಡುವಂತೆ ನಾನು ಮೂಲ ಮಾಲೀಕರಿಗೆ ಕೇಳಿದ್ದೆನು ಅಂದರೆ ಸರಿಯಲ್ಲ. ಮೂಲ ಮಾಲೀಕರು ನನಗೆ ಮಾರಾಟ ಮಾಡದೇ ಅದನ್ನು ಪ್ರತಿವಾದಿಗೆ ಮಾರಾಟ ಮಾಡಿದರು ಎಂಬ ಕೋಪದಿಂದ ನಾನು

**ಸಾಕ್ಷಿಯ ಸಹಿ** 05.12.2025

ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಕಾಶೆಯನ್ನು ಪುರಸಬೆಯಿಂದ ಪಡೆದಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**05-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** **05.12.2025**